# ಕೊಡಗಿನ ಅರೆಬಿಕಾ ಕಾಯಿಲೆಯ ಆತಂಕ

■ ಚಿತ್ರ– ಬರಹ:
**ಪುತ್ತರಿರ ಕರುಣ್ ಕಾಳಯ್ಯ**



**ಕೊ**ಡಗುವಿನಲ್ಲಿ ಈ ವರ್ಷ ಮಾನ್ಸೂನ್ ಮಳೆಯು ಬೇಗ ಆಗಮಿಸಿದ ಫಲವಾಗಿ ಕೊಡಗಿನ ಕಾಫಿ ಗಿಡಗಳು ಬಲುಬೇಗನೆ ಹೂ ಬಿಟ್ಟು ಹಣ್ಣಾಗತೊಡಗಿವೆ. ಇದರಿಂದ ಅತಿ ಬೇಗನೆ ಕೊಡಗಿನ ಅರೆಬಿಕಾ ಕಾಫಿಗಳು ಕೆಂಪಾಗುತ್ತಿವೆ.

ಸೋಮವಾರಪೇಟೆ ತಾಲೂಕಿನಲ್ಲೇ ಹೆಚ್ಚಾಗಿ ಅರೆಬಿಕಾ ಕಾಫಿ ತೋಟಗಳಿದ್ದು ಹಿಂದೆ ಈ ತಾಲೂಕನ್ನು ಅರೆಬಿಕಾ ಬೆಳೆಗೆ ಅತೀ ಸೂಕ್ತ ಸ್ಥಳವೆಂದೇ ಗುರುತಿಸಲಾಗಿತ್ತು. ಹಲವು ವರ್ಷಗಳ ನಂತರದಲ್ಲಿ ಬಗೆಬಗೆಯ ಸುಧಾರಿತ ಕಾಫಿ ಗಿಡಗಳನ್ನು ಇಲ್ಲಿನ ತೋಟಗಳಲ್ಲಿ ಬೆಳೆಯಲಾಗುತಿದೆ.

ಚೇರಳ ಶ್ರೀಮಂಗಲ ಗ್ರಾಮಕ್ಕೆ ಒಳಪಡುವ ಚೆಟ್ಟಳ್ಳಿಯಲ್ಲಿ ಜೂನ್ ತಿಂಗಳಿಂದಲೇ ಕೆಲವು ಅರೆಬಿಕಾ ಗಿಡಗಳಲ್ಲಿ ಕಾಫಿ ಕೆಂಪಗಾಗಿ ಹಣ್ಣಾಗತೊಡಗಿವೆ. ಈ ಹಣ್ಣುಗಳನ್ನು ಪ್ರಾಣಿ ಪಕ್ಷಿಗಳ ಆಹಾರವಾಗಿಸಿವೆ. ಜೊತೆಗೆ ಕೊಡಗಿನಲ್ಲಿ ಮಳೆಗಾಲದ ಸಮಯವಾದ್ದರಿಂದ ನೀರು ಬಿದ್ದು ಅರೆಬಿಕಾ ಹಣ್ಣುಗಳು ಒಡೆಯುತ್ತಿವೆ ಹಾಗೂ ಕೊಳೆಯುತ್ತಿವೆ.

ಇನ್ನೊಂದೆಡೆ ಕಾಂಡಕೊರಕ, ಕೊಳೆರೋಗ ಹಾಗೂ ಎಲೆತುಕ್ಕು ರೋಗದಿಂದ ಬೆಳೆಗಾರರು ತೊಂದರೆ ಅನುಭವಿಸುತ್ತಿದ್ದಾರೆ. ಅರೆಬಿಕಾದ ಸಲೆಕ್ಷನ್ 9 ಹಾಗೂ 6 ಗಿಡಗಳು ಮಳೆಗೆ ಸಿಕ್ಕರೆ ಬಲುಬೇಗನೆ ಹಣ್ಣಾಗುವ ಸಾಧ್ಯತೆ ಇದ್ದು ಹಣ್ಣುಗಳನ್ನು ಕುಯಿಲು ಮಾಡಲೇಬೇಕು. ಇಲ್ಲವಾದರೆ ಹಣ್ಣುಗಳಲ್ಲಿ ಬೆರಿಬೋರರ್ ಹರಡುವ ಸಾಧ್ಯತೆ ಇದೆ ಎಂದು ಚೆಟ್ಟಳ್ಳಿ ಕಾಫಿ ಸಂಶೋಧನಾ ಕೇಂದ್ರದ ಉಪನಿರ್ದೇಶಕ ಡಾ.ಜಗದೀಶನ್ ಹೇಳುತ್ತಾರೆ.

ಡಿಸೆಂಬರ್ ತಿಂಗಳಲ್ಲಿ ಮಂಜು ಗಿಡದ ಮೇಲೆ ಬಿದ್ದಾಗ ತೇವಾಂಶಕ್ಕೆ ಕೆಲವೊಂದು ಕಾಫಿ ಗಿಡಗಳಲ್ಲಿ ಹೂವಾಗಿ ಜೂನ್ ಹಾಗೂ ಜುಲೈ ತಿಂಗಳಲ್ಲಿ ಹಣ್ಣಾಗುವ ಸಾಧ್ಯತೆ ಇದೆ. ಹಣ್ಣುಗಳನ್ನು ಕೊಯ್ದು ಬೆರಿಬೋರ್ ಕಾಯಿಲೆ ವಂಶಾಭಿವೃದ್ಧಿ ಆಗದಂತೆ ಎಚ್ಚರ ವಹಿಸಬೇಕು. ಇಲ್ಲವಾದಲ್ಲಿ ಬೆಳೆ ಕೈಗೆ ಬರುವುದಿಲ್ಲ ಎನ್ನುತ್ತಾರೆ ಕಾಫಿ ಸಂಶೋಧನಾ ಕೇಂದ್ರದ ಕೀಟ ತಜ್ಞ ಡಾ. ಕುರಿಯನ್ ರಾಫೆಲ್. ಪ್ರತಿ ವರ್ಷ ಏನಾದರೊಂದು ತಾಪತ್ರಯಗಳು ಕಾಫಿ ಬೆಳೆಗಾರರಿಗೆ ಇದ್ದದ್ದೇ. ಈ ಸಲವೂ ಬೆಳೆಗಾರರು ಆತಂಕದಲ್ಲಿದ್ದಾರೆ. ಜುಲೈ ಆರಂಭದಲ್ಲಿ ಮಳೆ ಸ್ವಲ್ಪ ದೂರವೇ ಆಗಿರುವುದು ಕೆಲವರಲ್ಲಿ ಆಶಾಭಾವ ಹುಟ್ಟಿಸಿದೆ. ●

